**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ:686/2023**

ಚಾಸಾ: 1 ಪ್ರಾಸಾ:1

| | | |
|---|---|---|
| ಹೆಸರು | : | ಪಲ್ಲವಿ |
| ಗಂಡನ/ತಂದೆಯ ಹೆಸರು | : | ರಾಜು |
| ವಯಸ್ಸು | : | 28ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಕಾಲಿಕೆರೆ ಗ್ರಾಮ. |

**ದಿನಾಂಕ 25.11.2025 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ಆರೋಪಿತರು ನನಗೆ ಗೊತ್ತಿಲ್ಲ. ಚಾಸಾ-**2** ರಿಂದ ಚಾಸಾ-**7** ಗೊತ್ತು. ದಿ:**18.08.2023** ರಂದು ನಮ್ಮ ಮನೆಯಲ್ಲಿ ನನ್ನ ಅತ್ತೆ, ಮಾವ, ಜಮೀನಿನ ಬಳಿ ಹೋಗಿದ್ದು, ನನ್ನ ಗಂಡ ನಮ್ಮ ಹೊಸ ಮನೆಯ ಕಟ್ಟಡದ ಕೆಲಸವನ್ನು ನಿರ್ವಹಿಸುತ್ತಿದ್ದಾಗ ನಾನು ಸುಮಾರು ಮಧ್ಯಾಹ್ನ **1.00** ಗಂಟೆಯ ಸಮಯದಲ್ಲಿ ನನ್ನ ಗಂಡನಿಗೆ ಊಟ ತೆಗೆದುಕೊಂಡು ಹೋಗುವ ಸಲುವಾಗಿ ನನ್ನ **2** ವರ್ಷದ ಮಗುವಿನ ಜೊತೆಗೆ ಮನೆಯ ಬೀಗವನ್ನು ಹಾಕಿಕೊಂಡು ಮಧ್ಯಾಹ್ನ **2.00** ಗಂಟೆಗೆ ಊಟವನ್ನು ತೆಗೆದುಕೊಂಡು ಹೋಗಿದ್ದು, ನಂತರ ಸಂಜೆ **5.00** ಗಂಟೆಗೆ ಹಿಂದಿರುಗಿದಾಗ ಮನೆಗೆ ಹಾಕಿದ್ದ ಬೀಗವು ಯಾರೋ ಕಳ್ಳರು ಬಂದು ಮನೆಯ ಬೀಗವನ್ನು ಹೊಡೆದು ಮನೆಯ ಒಳಗಡೆ ಇದ್ದ ಬೀರಿವಿನ ಬೀಗ ಸಹ ಹೊಡೆದು ಹಾಕಿ, **4** ಮಕ್ಕಳ ಉಂಗುರಗಳನ್ನು ಮತ್ತು **2** ಚಿನ್ನದ ಉಂಗುರಗಳನ್ನು ಒಟ್ಟು **11** ಗ್ರಾಂ ಒಡವೆಗಳನ್ನು ಕಳವು ಮಾಡಿಕೊಂಡು ಹೋಗಿದ್ದು, ಆದರೆ ಯಾರು ಕಳ್ಳತನ ಮಾಡಿರುತ್ತಾರೆನ್ನುವ ವಿಚಾರ ನನಗೆ ತಿಳಿದಿರುವುದಿಲ್ಲ. ಸದರಿ ವಿಷಯಕ್ಕೆ ಸಂಬಂದಪಟ್ಟಂತೆ ನಾನು ದಿ:**01.09.2023** ರಂದು ಪೋಲಿಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ಮತ್ತು ದೂರಿನಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ-**1** ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**1(ಎ)** ಎಂದು ಗುರುತಿಸಲಾಯಿತು.

ಈ ಪ್ರಕರಣಕ್ಕೆ ಸಂಬದಪಟ್ಟಂತೆ ನಾನು ತನಿಖಾಧಿಕಾರಿಯವರಿಗೆ ಯಾವುದೇ ಸ್ಥಳ ಅನ್ನು ತೋರಿಸಿರುವುದಿಲ್ಲ. ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ನ್ಯಾಯಾಲಯದ ಮುಂದೆ ಇರುವ ದಾಖಲೆಯನ್ನು ನೋಡಿ ಅದು ಸ್ಥಳ ಮಹಜರ್ ಆಗಿದ್ದು, ಸದರಿ ಸ್ಥಳ ಮಹಜರ್ ಅನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸ್ಥಳ ಮಹಜರ್ ಅನ್ನು ನಿಪಿ-**2** ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**2(**ಎ**)** ಎಂದು ಗುರುತಿಸಲಾಯಿತು. ಸದರಿ ಸ್ಥಳ ಮಹಜರ್ ಗೆ ನಾನು ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-**2** ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ.

ಈ ಪ್ರಕರಣಕ್ಕೆ ಸಂಬದಪಟ್ಟಂತೆ ಪೋಲಿಸರು ಇನ್ನೊಂದು ಸ್ಥಳ ಮಹಜರ್ ಅನ್ನು ಮಾಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ದಾಖಲೆಯನ್ನು ನೋಡಿ ಅದು ಸ್ಥಳ ಮಹಜರ್ ಆಗಿದ್ದು, ಸದರಿ ಸ್ಥಳ ಮಹಜರ್ ಅನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸ್ಥಳ ಮಹಜರ್ ಅನ್ನು ನಿಪಿ-**3** ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**3(**ಎ**)** ಎಂದು ಗುರುತಿಸಲಾಯಿತು. ಸದರಿ ಸ್ಥಳ ಮಹಜರ್ ಗೆ ನಾನು ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-**3** ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**ವಾಟೀ ಸವಾಲುಃ ಎಪಿಪಿಯವರಿಂದಃ**

ದಿನಾಂಕ 01.09.2023 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 5.30-6.15 ಗಂಟೆಯವರೆಗೆ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ ಕ್ರಮ ಜರುಗಿಸಿರುತ್ತಾರೆಂದರೆ ಸರಿಯಲ್ಲ.

ದಿನಾಂಕ 02.09.2023 ರಂದು 1 ಮತ್ತು 2ನೇ ಆರೋಪಿತರು ತೋರಿಸಿದ ಸ್ಥಳದಲ್ಲಿ ನನ್ನ, ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಗ್ಗೆ 7.50-8.20 ಗಂಟೆಯವರೆಗೆ ನಿಪಿ-3 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ ಕ್ರಮ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಅದೇ ದಿನ 1 ಮತ್ತು 2 ನೇ ಆರೋಪಿತರನ್ನು ಪೋಲಿಸರು ನನಗೆ ತೋರಿಸಿ ಸದರಿ ಆರೋಪಿತರು ನನ್ನ

ಮನೆಯಲ್ಲಿ ಚಿನ್ನವನ್ನು ಕಳ್ಳತನ ಮಾಡಿದವರು ಎಂದು ಹೇಳಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆಂದು ತಿಳಿದಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಜೊತೆ ರಾಜಿ ಮಾಡಿಕೊಂಡ ಕಾರಣ ಈ ದಿನ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**